ತಮ್ಮ ಬೇಡಿಕೆಗಳನ್ನು ಮಂಡಿಸುವುದು ಅವರ ಸ್ವಭಾವವಾಗಿತ್ತು. ಲೂಸಿ ಮತ್ತು ಗ್ರೇಸಿ ಸಹ ಅಲ್ಪಪ್ರಮಾಣದಲ್ಲಿ ಹೀಗಿದ್ದರೂ, ಅವರ ನಗುವಿನಲ್ಲಿ ಸರಸತೆಯಿದೆ. ಆದರೆ ಕರೀನಾ ಮತ್ತು ಜೊಹಾನಾರ ನಗುವಿನಲ್ಲೂ ಕೋಲಾಹಲವಿದೆ. ನನಗೆ ಅವರ ಸ್ವಭಾವ ಆಕ್ರಮಣಕಾರಿ, ವಿದ್ರೋಹಕಾರಿಯಾಗಿದ್ದು, ಅವರ ವರ್ತನೆಯಲ್ಲಿ ಶಿಷ್ಟಾಚಾರದ ಕೊರತೆ ಎದ್ದು ಕಾಣುತ್ತಿತ್ತು. ಒಂದು ವೇಳೆ ಅವರ ಮನಸ್ಸಿಗೆ ಲೇಶಮಾತ್ರವೂ ಸರಿ ತೋರದಿದ್ದರೆ, ಸಿಟ್ಟಿನಿಂದ ಬುಸುಗುಟ್ಟುತ್ತಿದ್ದರು. ಕರೀನಾ ಮತ್ತು ಜೊಹಾನಾರ ಸ್ವಭಾವವನ್ನು ನೋಡಿ ಯಾರೂ ಅವರ ಮನೆಯಲ್ಲಿ ಹೆಚ್ಚು ದಿನ ಉಳಿಯುತ್ತಿರಲಿಲ್ಲ.

ತಾನು ಬುದ್ಧಿವಂತೆ, ತನಗೆ ಯಾರ ಮಾರ್ಗದರ್ಶನ ಅಥವಾ ಸಲಹೆಯ ಅಗತ್ಯವಿಲ್ಲ ಎಂಬಂತೆ ಜೊಹಾನಾ ವರ್ತಿಸುತ್ತಿದ್ದಳು. ಅವಳು ತನ್ನ ತಾಯಿಯ ಮಾತನ್ನು ಕೇಳುತ್ತಿರಲಿಲ್ಲ. ಆದರೆ ನಿತ್ಯ ರಾತ್ರಿ ತನ್ನ ತಾಯಿಗೆ, ತನ್ನ ಜೊತೆಯಲ್ಲಿ ತನಗೆ ನಿದ್ರೆ ಬರುವವರೆಗೆ ಮಲಗುವಂತೆ ಹೇಳುತ್ತಿದ್ದಳು. ರಾತ್ರಿ ಎಚ್ಚರವಾದರೆ ತನ್ನ ಕೋಣೆಯಿಂದಲೇ, 'ಮಮ್ಮಿ, ನಿದ್ರೆ ಬರ್ತಿಲ್ಲ, ನನ್ನ ಹತ್ರ ಬಾ' ಎಂದು ಕಿರುಚುತ್ತಿದ್ದಳು. ನೀನಾ ಮಾತನಾಡದೆ ನನ್ನ ಪಕ್ಕದಿಂದ ಎದ್ದು ಜೊಹಾನಾಳ ಕೋಣೆಗೆ ಹೋಗುತ್ತಿದ್ದಳು. ಇದನ್ನು ನೋಡಿ, ನೀನಾ ಇಷ್ಟು ಶಾಂತಿಯಿಂದ ಹೇಗಿರುತ್ತಾಳೆ ಎಂದು ನನಗೆ ಆಶ್ಚರ್ಯವಾಗುತ್ತಿತ್ತು. ಆ ವೇಳೆಯ ಜೊಹಾನಾಳ ಚೀರಾಟ ಸಿಂಹದ ಗರ್ಜನೆಯಂತೆ ತೋರುತ್ತಿತ್ತು; ನೀನಾ ಮೌನಿಯಾಗಿ ನನ್ನ ಪಕ್ಕದಿಂದ ಎದ್ದು ಅವಳ ಬಳಿಗೆ ಹೋಗುತ್ತಿದ್ದಳು. ಅಷ್ಟು ದರ್ಪದ ಹೆಣ್ಣು ನೀನಾ ತನ್ನ ಮಗಳೆದುರು ಏಕೆ ತಣ್ಣಗಾಗುತ್ತಾಳೆ ಎಂದು ಆಶ್ಚರ್ಯವಾಗುತ್ತಿತ್ತು. ಅವಳೇಕೆ ತನ್ನ ಮಗಳ ಒರಟುತನವನ್ನು ಸಹಿಸುತ್ತಾಳೆ? ಎಲ್ಲಾ ತಾಯಂದಿರು ಸಹ ಹೀಗೆಯೇ?

ನನ್ನ ನೆನಪಿಗೆ ಬರುತ್ತದೆ. ಲೂಸಿ ಮತ್ತು ಗ್ರೇಸಿ ತಮ್ಮ ಬೇಸಿಗೆ ರಜಾದಲ್ಲಿ ಕೋಪನ್‌ಹೇಗನ್‌ಗೆ ಬಂದಿದ್ದರು. ಮನೆಯಲ್ಲಿ ನಾಲ್ಕು ಜನ ಹುಡುಗಿಯರು. ಮನೆ ತುಂಬಿದಂತೆ ತೋರುತ್ತಿತ್ತು. ಅಂದು ಸಂಜೆ ನಾವು ಟಿವೋಲಿ ಗಾರ್ಡನ್‌ಗೆ ಹೋಗುವ ಕಾರ್ಯಕ್ರಮವಿತ್ತು. ನಾವು ಎಲ್ಲರಿಗೂ ಟಿವೋಲಿ ಗಾರ್ಡನ್‌ಗೆ ಕರೆದೊಯ್ಯುವುದಾಗಿ ಮಾತು ಕೊಟ್ಟಿದ್ದೆವು. ಆದರೆ ಬೆಳಿಗ್ಗೆ ನಾನು ಮತ್ತು ನೀನಾ ನಮ್ಮ ಪರಿಚಿತರೊಬ್ಬರನ್ನು ಭೇಟಿಯಾಗಲು ಹೋಗಬೇಕಾಯಿತು. ಅವನು ಓಸ್ಲೋದಿಂದ ಬಂದಿದ್ದ, ಅವನು ತನ್ನೆಲ್ಲಾ ಹಳೆಯ ಸ್ನೇಹಿತರನ್ನು ಸಂಧಿಸಲು ಒಂದು ರೆಸ್ಟೋರೆಂಟಿಗೆ ಎಲ್ಲರನ್ನು ಕರೆಸಿದ್ದ. ನಾವು ನಮ್ಮ ನಮ್ಮ ಪುತ್ರಿಯರಿಗೆ, ನಾವು ಒಂದು ಒಂದೂವರೆ ಗಂಟೆಗೆ ಮರಳಿ ಬರುತ್ತೇವೆ, ನೀವು ಸಿದ್ಧವಾಗಿರಿ ಎಂದು ಹೇಳಿ ಹೋದೆವು.

ಆದರೆ ಅಲ್ಲಿಂದ ಮರಳಿ ಬರಲು ತಡವಾಯಿತು. ಒಂದು ಒಂದೂವರೆ ಗಂಟೆಗೆ ಪ್ರತಿಯಾಗಿ ಮೂರ್ನಾಲ್ಕು ಗಂಟೆಗಳು ಹಿಡಿಯಿತು. ಲೂಸಿ ಮತ್ತು ಗ್ರೇಸಿ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಏನೂ ಮಾತನಾಡಲಿಲ್ಲ. ನಮ್ಮ ವಿಳಂಬವನ್ನು ಸಾಮಾನ್ಯ ಸಂಗತಿಯೆಂದು ತಿಳಿದರು; ದೊಡ್ಡವರಿಗೂ ಅವರದೇ ಆದ ಕೆಲವು ಅವಶ್ಯಕತೆಗಳಿರುತ್ತವೆ, ಅವರು ಅನೇಕ ಸಾಮಾಜಿಕ ಕಟ್ಟುಪಾಡುಗಳನ್ನು ನಿರ್ವಹಿಸಬೇಕಾಗುತ್ತದೆ ಎಂಬ ಅರಿವು ಇಬ್ಬರಿಗೂ ಇತ್ತು. ಆದರೆ ಕರೀನಾ ಮತ್ತು ಜೊಹಾನಾ... ಅವರ ಬಗ್ಗೆ ಏನು ಹೇಳಲಿ? ಇಬ್ಬರೂ ಅತ್ಯಂತ ಕೋಪಿಷ್ಟರಾದರು. ತಮ್ಮ ಮುಖವನ್ನು ಊದಿಸಿಕೊಂಡರು. ನನ್ನೊಂದಿಗೆ ಮತ್ತು ನೀನಾಳೊಂದಿಗೆ ಮಾತು ನಿಲ್ಲಿಸಿದರು. 'ಇನ್ನು ನಾವೆಲ್ಲಿಗೂ ಬರುವುದಿಲ್ಲ, ನೀವು ನಿಮ್ಮ ನಿಮ್ಮಲ್ಲೇ ಮೋಜು ಮಸ್ತಿ ಮಾಡಿ, ಮಕ್ಕಳಾದ ನಮ್ಮನ್ನು ಮರೆಯಿರಿ...' ಎಂದು ಟಿವೋಲಿ ಗಾರ್ಡನ್‌ಗೆ ಬರಲು ಒಪ್ಪಲಿಲ್ಲ.

ನಾನು ಮತ್ತು ನೀನಾ ಅವರಿಗೆ ನಮ್ಮ ಬಳಿ ಇನ್ನೂ ಸಾಕಷ್ಟು ಸಮಯವಿದೆ, ಟಿವೋಲಿ ಗಾರ್ಡನ್ ರಾತ್ರಿ ಹತ್ತು ಗಂಟೆಗೆ ಮುಚ್ಚುತ್ತದೆ, ಈಗ ನಾವಲ್ಲಿಗೆ ಹೋಗಿ ಅಡ್ಡಾಡಬಹುದು ಎಂದು ಸಮಾಧಾನಪಡಿಸಿದೆವು. ಲೂಸಿ ಮತ್ತು ಗ್ರೇಸಿ ಸಹ ಅವರನ್ನು ಸಮಾಧಾನ ಪಡಿಸಿದರು. ಆದರೆ ಕರೀನಾ ಮತ್ತು ಜೊಹಾನಾ ಕೂತಲ್ಲಿಂದ ಕದಲಲಿಲ್ಲ. ಅವರನ್ನು ಒತ್ತಾಯಿಸುವುದು ಜೇನಿನ ಗೂಡಿಗೆ ಕೈಹಾಕಿದಂತಾಗುತ್ತಿತ್ತು. ಲೂಸಿ ಮತ್ತು ಗ್ರೇಸಿ ಮುಗ್ದರಾಗಿ ಉಳಿದರು. ಇಡೀ ದಿನ ಹಾಳಾಯಿತು. ನನಗೆ ಕರೀನಾ ಮತ್ತು ಜೊಹಾನಾರ ತುಂಟತನ ತುಂಬಾ ಅಪಕ್ವವಾಗಿದೆ ಅನ್ನಿಸಿತ್ತು. ನೀನಾ ತನ್ನ ಮಕ್ಕಳನ್ನು ಗದರಿಸುವುದಕ್ಕೆ ಬದಲು 'ಸಾರಿ' ಎಂದಳು.

ನನ್ನ ಮಾನದಂಡ ಬೇರೆಯದೇ ಆಗಿತ್ತು. ಮಕ್ಕಳ ಒಳ್ಳೆಯ ವಿಚಾರಕ್ಕೆ ನನ್ನ ಪ್ರಾಣವೇ ಮುಡಿಪಾಗಿತ್ತು. ಅನುಚಿತ ವಿಚಾರವನ್ನು ಕುರುಡಾಗಿ ನಂಬುವುದನ್ನು ನಾನು ಬುದ್ಧಿವಂತಿಕೆ ಎಂದು ತಿಳಿಯುವುದಿಲ್ಲ. ನನ್ನ ಪ್ರಕಾರ ಕಿಶೋರರ ಮೂರ್ಖ ವ್ಯವಹಾರಕ್ಕೆ ಬೆಲೆಯನ್ನು ಕೊಡಬಾರದು. ಒಂದು ವೇಳೆ ಅವರು ತಪ್ಪಾಗಿ ವರ್ತಿಸಿದರೆ, ತಪ್ಪಾಗಿ ನಡೆದುಕೊಂಡರೆ ಅವರಿಗೆ ಒಂದು ಅರ್ಥಪೂರ್ಣ ಶಿಕ್ಷೆ ಅವಶ್ಯವಾಗಿ ಸಿಗಲೇಬೇಕು.

'ನಿಮ್ಮನ್ನು ನೀವು ದೊಡ್ಡ ಸಾಹೇಬರೆಂದು ತಿಳಿಯಬೇಡಿ. ಎಲ್ಲವೂ ನಿಮಗೆ ಕೂತಲ್ಲಿಯೇ ಲಭ್ಯವಾಗದು, ಎಲ್ಲವೂ ನಿಮ್ಮಿಚ್ಛೆಯಂತೆಯೇ ನಡೆಯದು, ನೀವೇನು ವಿಶೇಷ ವ್ಯಕ್ತಿಗಳಲ್ಲ, ನಿಮ್ಮ ತಂದೆ–ತಾಯಿ ನಿಮ್ಮ ಸೇವಕರಲ್ಲ, ಭಾವನಾತ್ಮಕವಾಗಿ ಬ್ಲಾಕ್‌ಮೇಲ್ ಮಾಡುವ ಅಗತ್ಯವಿಲ್ಲ. ಇನ್ನು ನೀವೇನು ಮಹಾ? ನೀವು ಇನ್ನೂ ಹತ್ತನೆಯ ತರಗತಿಯನ್ನೂ ಪಾಸು ಮಾಡಿಲ್ಲ! ನಿಮಗೆ ಎರಡು ರೂಪಾಯಿ ಸಂಪಾದಿಸುವ ಯೋಗ್ಯತೆಯಿಲ್ಲ! ಈ ಗತ್ತು ಯಾರಿಗೆ ಬೇಕು? ಶಿಸ್ತಿನಲ್ಲಿರಿ, ಶಿಷ್ಟಾಚಾರದಿಂದ ವರ್ತಿಸಿ, ಒಂದು ವೇಳೆ ಅಶಿಸ್ತಿನಿಂದ ವರ್ತಿಸಿದರೆ, ಶಿಕ್ಷೆಯನ್ನು ಅನುಭವಿಸಲಾಗುವುದು' ಹೀಗೆ ಅವರಿಗೆ ತಿಳಿಯಪಡಿಸಬೇಕಾದ ಅಗತ್ಯವಿದೆ.

ಕರೀನಾಳ ಕಿಶೋರಾವಸ್ಥೆಯ ಆ ಹಂತ ಚಂಚಲತೆಯಿಂದ ಕೂಡಿತ್ತು. ಅವಳು ಹದಿನೇಳು ಹದಿನೆಂಟನೆಯ ವಯಸ್ಸಿಗೆ ಕಾಲಿಟ್ಟಾಗ ತಿಳಿವಳಿಕಸ್ಥಳಾದಳು. ಅವಳು ತನ್ನ ಜೀವನದ ಬಗ್ಗೆ ಜಾಗ್ರತಗೊಂಡಳು. ಇಂದಿನ ಯುವತಿಯೊಬ್ಬಳು ತನ್ನ ಜೀವನದ ಅನಿವಾರ್ಯ ಕೆಲಸಗಳನ್ನು ಸೂಕ್ತ ಸಮಯದಲ್ಲಿ, ಸೂಕ್ತ ರೀತಿಯಲ್ಲಿ ಹಾಗೂ ಸೂಕ್ತ ಕ್ರಮದಲ್ಲಿ ಮಾಡಿದರೆ, ಅವಳು ಪ್ರಶಂಸೆಗೆ ಯೋಗ್ಯಳು ಎಂದು ನಾನು ತಿಳಿಯುತ್ತೇನೆ. ಕರೀನಾ ತನ್ನ ಜೀವನದ ಎಲ್ಲಾ ಕೆಲಸ–ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಕೈಗೊಂಡಳು. ವಿದ್ಯಾಭ್ಯಾಸ, ಕರಿಯರ್, ವಿವಾಹ ಮತ್ತು ಮಗು... ಎಲ್ಲವೂ ಸೂಕ್ತ ಸಮಯದಲ್ಲಿ, ಸೂಕ್ತ ಕ್ರಮದಲ್ಲಿ ನಿರ್ವಹಿಸಿದಳು. ಹೀಗಾಗಿ ನನ್ನ ಮನಸ್ಸಿನಲ್ಲಿ ಅವಳ ಬಗ್ಗೆ ಒಂದು ರೀತಿಯಲ್ಲಿ ಗೌರವವೇ ಇತ್ತು. ಹನ್ನೆರಡನೆಯ ತರಗತಿಯ ನಂತರ ಅವಳು ವಿದ್ಯಾಭ್ಯಾಸಕ್ಕಾಗಿ ಲಂಡನ್‌ಗೆ ಹೋಗಿದ್ದಳು. ವಿದ್ಯಾಭ್ಯಾಸವನ್ನು ಮುಗಿಸಿದ ನಂತರ ಅಲ್ಲಿಯೇ ನೌಕರಿ ಮಾಡಲಾರಂಭಿಸಿದಳು. ಅಲ್ಲಿ ಅವಳಿಗೆ ಸಂಯೋಗವೆಂಬಂತೆ ಒಬ್ಬ ಡೆನಿಶ್ ಬಾಯ್‌ಫ್ರೆಂಡ್ ಸಹ ಸಿಕ್ಕಿದ್ದ. ಹೀಗಾಗಿ ಅವಳು ಬಹುತೇಕ ಮನೆಯಿಂದ ದೂರವಿದ್ದಳು, ನನ್ನ ಅವಳ ಸಾಮೀಪ್ಯ ಸಹ ವಿರಳವಾಯಿತು, ಮನಸ್ತಾಪ ಸಹ ಕಡಿಮೆಯಾಯಿತು.

ಆದರೆ ಜೊಹಾನಾ ಸದಾ ಸಮಸ್ಯೆಯಾದಳು. ನನ್ನ ಪ್ರಕಾರ ಅವಳು ಇಂದಿಗೂ ಸಮಸ್ಯೆಯೇ. ಅವಳು ಆರಂಭದಿಂದಲೇ ದುಡುಕಿನ ಸ್ವಭಾವವನ್ನು ಹೊಂದಿದ್ದಳು, ಶಿಷ್ಟಾಚಾರ ಅವಳಲ್ಲಿರಲಿಲ್ಲ. ಅವಳು ತನ್ನ ಹೋಂವರ್ಕ್ ಮಾಡುವುದಿಲ್ಲ, ಶಿಷ್ಟಾಚಾರದಿಂದ ವರ್ತಿಸುವುದಿಲ್ಲ, ಅಧ್ಯಾಪಕರಿಗೆ ಎದುರುತ್ತರ ಕೊಡುತ್ತಾಳೆ ಎಂಬ ದೂರು ಅವಳ ಶಾಲೆಯಿಂದ ಬರುತ್ತಿತ್ತು. ಅವಳು ಮನೆಗೆ ಬರುವುದಕ್ಕೂ ನಿಶ್ಚಿತ ವೇಳೆಯಿರಲಿಲ್ಲ. ನೀನಾ ಅವಳಿಗೆ ಏನೂ ಹೇಳುತ್ತಿರಲಿಲ್ಲ. ನಾನೇನಾದರು ಹೇಳಿದರೆ, ನನ್ನ ಬಗ್ಗೆ ರೇಗುತ್ತಿದ್ದಳು.

ಜೊಹಾನಾ ತಡರಾತ್ರಿಯವರೆಗೆ ಎಚ್ಚೆತ್ತಿರುತ್ತಿದ್ದಳು. ಮೊಬೈಲ್, ಐಪ್ಯಾಡ್, ಕಿಂಡಲ್ ಮುಂತಾದವುಗಳಲ್ಲಿ ಮಗ್ನಳಾಗಿರುತ್ತಿದ್ದಳು.

ಅದೊಂದು ದಿನ ಅವಳು ಕಂಪ್ಯೂಟರಿನಲ್ಲಿ ವರ್ಕ್ ಮಾಡುತ್ತಿದ್ದಳು. ಕಡೆಗೆ ಕಂಪ್ಯೂಟರನ್ನು ಹಾಗೆಯೇ ತೆರೆದು ಹೊರಟು ಹೋದಳು. ನಾನು ಲ್ಯಾಪ್‌ಟಾಪ್ ಆಫ್ ಮಾಡಲು ಹೋದವನು ತಡೆದೆ. ನನ್ನ ಸಹೋದ್ಯೋಗಿಯೊಬ್ಬ, ಕಿಶೋರ ವಯಸ್ಸಿನ ಮಕ್ಕಳನ್ನು ಸಂಪೂರ್ಣವಾಗಿ ನಂಬಬಾರದು. ಅವರ ಡೈರಿ, ಕಾಪಿ ಪುಸ್ತಕ, ಶಾಲೆಯ ಬ್ಯಾಗ್, ಇಮೇಲ್ಸ್ ಎಲ್ಲವನ್ನೂ ಪರೀಕ್ಷಿಸುತ್ತಿರಬೇಕು. ಅವರು ಯಾರನ್ನು ಭೇಟಿಯಾಗುತ್ತಾರೆ, ಅವರ ಸ್ನೇಹಿತರು ಯಾರು, ಅವರು ಯಾರಿಗೆ ಫೋನ್ ಮಾಡುತ್ತಾರೆ, ಎಲ್ಲವನ್ನೂ ಗಮನಿಸುತ್ತಿರಬೇಕು ಎಂದು ತನ್ನ ಅನುಭವದಿಂದ ಹೇಳುತ್ತಾನೆ. ಸರಿ, ನಾನು ಜೊಹಾನಾಳ ಕಂಪ್ಯೂಟರ್ ಸ್ಕ್ರೀನ್‌ನಲ್ಲಿ ಓದಲಾರಂಭಿಸಿದೆ. ಜೊಹಾನಾ ತನ್ನ ಗೆಳತಿಯೊಬ್ಬಳೊಂದಿಗೆ ಫೇಸ್‌ಬುಕ್‌ನಲ್ಲಿ ಚಾಟ್ ಮಾಡುತ್ತಿದ್ದಳು.

(ಸಶೇಷ)